ಆ) ಸದರಿ ಸರ್ವೆ ನಂಬರ್‌ನಲ್ಲಿ ಲಿಂಗಪ್ಪ ಬಿನ್ ತಿಮ್ಮಯ್ಯ ಇವರ ಹೆಸರಿಗೆ ೧ಎಂಎಟ್ರು ಪಹಣಿಯನ್ನು ಬರೆದಿದೆ.

ಇ) ಹಾಲಿ ಲಭ್ಯವಿರುವ ಒಟ್ಟು ಸರ್ಕಾರೀ ಜಮೀನಿನಲ್ಲಿ ಶೇಕಡ ೫೦ ಭಾಗದಷ್ಟು ಜಮೀನನ್ನು ಹರಿಜನ ಮತ್ತು ಗಿರಿಜನರಿಗೆ ಹಂಚುವಂತೆ ಭೂ ಮಂಜೂರಾತಿ ನಿಯಮಗಳಲ್ಲಿ ಈಗಾಗಲೇ ಅನುವು ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

## ಭೂನ್ಯಾಯ ಮಂಡಳಿಯ ಸದಸ್ಯರುಗಳು

೧೭೦೩. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಸಣ್ಣ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನ ಭೂ ನ್ಯಾಯ ಮಂಡಳಿಯ ಸದಸ್ಯರುಗಳಿಗೆ ಕಳೆದ ೩ ವರ್ಷದಿಂದ ಪ್ರವಾಸ ಮತ್ತು ದಿನ ಭತ್ಯೆ ಕೊಡಲಾಗಿದೆಯೆ.

ಆ) ಹಾಗಿಲ್ಲದಿದ್ದಲ್ಲಿ ಸದರಿ ಮಂಡಳಿಯಿಂದ ಬಾಕಿ ಕೊಡಬೇಕಾಗಿರುವ ಸದಸ್ಯರುಗಳು ಯಾರು ಯಾವಾಗ ಕೊಡುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಗುಬ್ಬಿ ತಾಲ್ಲೂಕಿನ ಭೂ ನ್ಯಾಯ ಮಂಡಳಿಯ ಸದಸ್ಯರುಗಳಿಗೆ ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಆ ಸದಸ್ಯರ ಪೈಕಿ ಮೂವರಿಗೆ ಸಿಟ್ಟಿಂಗ್ ಫೀ ಮತ್ತು ದಿನ ಭತ್ಯೆಗಳನ್ನು ಭಾಗಶ: ಪಾವತಿ ಮಾಡಲಾಗಿದೆ (ಪಾರ್ಟ್ ಪೇಮೆಂಟ್). ೧೯೮೫-೮೬ನೇ ಸಾಲಿಗೆ ಬಜೆಟ್ ಇಲ್ಲದೇ ಇದ್ದ ಕಾರಣದಿಂದ ಪಾವತಿಯಾಗಿರುವುದಿಲ್ಲ

ಮತ್ತೊಬ್ಬ ಸದಸ್ಯರಾದ ಶ್ರೀ ಜಿ. ಎಸ್. ಶಿವನಂಜಪ್ಪ ಶಾಸಕರು ಇವರಿಗೆ ಸಿಟ್ಟಿಂಗ್ ಫೀ ಮತ್ತು ಟಿ.ಎ. ಡಿ.ಎ. ಪಾವತಿ ಆಗಿರುವುದಿಲ್ಲ.

ಇ) ತಾಲ್ಲೂಕು ಭೂ ನ್ಯಾಯ ಮಂಡಳಿ, ಗುಬ್ಬಿಯ ಸದಸ್ಯರುಗಳಿಗೆ ಪಾವತಿ ಆಗಬೇಕಾದ ಹಣದ ವಿವರಗಳು ಹಾಗೂ ಅವರ ಹೆಸರುಗಳು ಕೆಳಕಂಡಂತಿವೆ.

| ಭೂ ನ್ಯಾಯ ಮಂಡಳಿಯ ಸದಸ್ಯರ ಹೆಸರು | | ಸಿಟ್ಟಿಂಗ್ ಫೀ | ಟಿ.ಎ. ಡಿ.ಎ. | ಒಟ್ಟು |
|---|---|---|---|---|
| | ಶ್ರೀಯುತರಾದ : | | | |
| ೧ | ಬಿ. ಎಸ್. ಶಿವನಂಜಪ್ಪ ಶಾಸಕರು, (೧೯೮೫-೮೬ ಅಕ್ಟೋಬರ್‌ನಿಂದ ೧೯೮೮ರ ಏಪ್ರಿಲ್ ವರೆಗೆ ಪಾವತಿ ಮಾಡಬೇಕಾದ ಹಣ) | ೯೬೦ | ೯೯೦ | ೧೯೫೦ |
| ೨ | ಆಡಿವಪ್ಪ, ಗುಬ್ಬಿ | ೨೭೦ | — | ೨೭೦ |
| ೩ | ಮೊಡ್ಡ ನಂಜಪ್ಪ, ಕೇಲೂರು | ೫೧೦ | ೫೭೦ | ೧೦೮೦ |
| ೪ | ಎಚ್. ಎಚ್. ವಿರುಪಾಕ್ಷ ಹಾಗಲವಾಡಿ | ೪೮೦ | ೧೦೨೦ | ೧೫೦೦ |
| | ಒಟ್ಟು | ೨೨೫೦ | ೨೫೮೦ | ೪೮ ೦ |

೧೯೮೮-೮೯ನೇ ಸಾಲಿನಲ್ಲಿ ತುಮಕೂರು ಜಿಲ್ಲೆಗೆ ೨೮,೦೦೦ ರೂಪಾಯಿಗಳ ಅನುದಾನ ಬಿಡುಗಡೆ ಆಗಿದ್ದು ಆದರಲ್ಲಿ ಗುಬ್ಬಿ ತಾಲ್ಲೂಕು ಭೂ ನ್ಯಾಯ ಮಂಡಳಿಯ ಸದಸ್ಯರಿಗೆ ಟಿ. ಎ. ಹಾಗೂ ಡಿ ಎ. ಮತ್ತು ಸಿಟ್ಟಿಂಗ್ ಫೀ ನೀಡುವುದಕ್ಕಾಗಿ ೪೦೦೦ ರೂಪಾಯಿಗಳ ಹಣವನ್ನು ಮೇ ೮೮ರಲ್ಲಿ ಬಿಡುಗಡೆ ಮಾಡಲಾಗಿದ್ದು, ಭೂ ನ್ಯಾಯ ಮಂಡಳಿಯ ಸದಸ್ಯರುಗಳಿಗೆ ಬಾಕಿ ಇರುವ ಬಿಲ್ಲುಗಳನ್ನು ಈ ವಂಟನ ದಲ್ಲಿ ಚುಕ್ತಗೊಳಿಸಿ ಉಳಿದ ಬಾಕಿ ಬಿಲ್ಲುಗಳನ್ನು ಮುಂದೆ ವಂಟನ ಬಿಡುಗಡೆ ಮಾಡಿದಾಗ ಪಾವತಿ ಮಾಡ ಲಾಗುತ್ತದೆ (ಈ ಬಾಬ್ತಿಗಾಗಿ ಈ ವರ್ಷದ ಬಜೆಟ್‌ನಲ್ಲಿ ಅಂದರೆ ೧೯೮೮-೮೯ರಲ್ಲಿ ರೂ. ೨೦.೦೦ ಲಕ್ಷ ಹಣವನ್ನು ನಿಗಧಿಪಡಿಸಲಾಗಿದ್ದು ಸದಸ್ಯರಿಗೆ ಬರಬೇಕಾದ ಬಾಕಿ ಟಿ.ಎ. ಡಿ.ಎ. ಹಾಗೂ ಸಿಟ್ಟಿಂಗ್ ಫೀ ಹಣದ ಪಾವತಿ ಮಾಡುವಲ್ಲಿ ಯಾವುದೇ ತೊಂದರೆ ಇರುವುದಿಲ್ಲ).

## ಮೂರನೇ ಹಿಂದುಳಿದ ಆಯೋಗ

೧೫೫೫. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂರನೇ ಹಿಂದುಳಿದ ಆಯೋಗದ ರಚನೆಯಾಗಿದೆಯೆ ?

ಆ) ಹಾಗಿದ್ದಲ್ಲಿ, ಆಯೋಗದಲ್ಲಿರುವ ಸದಸ್ಯರು ಯಾರು ?

ಇ) ಆಯೋಗದ ವರದಿಯನ್ನು ಮುಂದಿನ ಸಾರ್ವತ್ರಿಕ ಚುನಾವಣೆ ಮುಂಚೆ ಒಪ್ಪಿಸಲು ಸರ್ಕಾರ ಆದೇಶಿಸಿರುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಇದು ಏಕ ಸದಸ್ಯ ಆಯೋಗವಾಗಿರುತ್ತದೆ. ಇದರ ಅಧ್ಯಕ್ಷರು ಸರ್ವೋಚ್ಚ ನ್ಯಾಯಾಲ ಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಓ. ಚಿನ್ನಪ್ಪ ರೆಡ್ಡಿಯವರು.

ಇ) ಆಯೋಗವು ತನ್ನ ವರದಿಯನ್ನು ಒಂದು ವರ್ಷದ ಒಳಗಾಗಿ ಸಲ್ಲಿಸಬೇಕೆಂದು ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ ೨೫೯ ಬಿಸಿಎ ೮೮, ದಿನಾಂಕ ೯-೩-೧೯೮೮ರಲ್ಲಿ ಸೂಚಿಸಿದೆ.

## ಕಾರ್ಮಿಕ ನ್ಯಾಯಾಲಯಗಳು

೧೬೬೮. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕಾರ್ಮಿಕ ನ್ಯಾಯಾಲಯಗಳ ಸಂಖ್ಯೆ ಎಷ್ಟು ?

ಆ) ಈ ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರುಗಳ ಹುದ್ದೆಗಳ ಸಂಖ್ಯೆ ಎಷ್ಟು ?

ಇ) ಈ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಈ) ಈ ಮೊಕದ್ದಮೆಗಳ ಇತ್ಯರ್ಥಕ್ಕಾಗಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ಒಟ್ಟು—೧೨

ಆ) ಒಟ್ಟು ಹಾಲಿ ೪, ಮಂಗಳೂರಿನ ಕಾರ್ಮಿಕ ನ್ಯಾಯಾಲಯಕ್ಕೆ ಅಧ್ಯಕ್ಷಾಧಿಕಾರಿಗಳನ್ನು ೨೩-೫-೮೮ ರಿಂದ ನಿಯುಕ್ತಿಗೊಳಿಸಿದೆ. ಆದರೂ ೩ ಸ್ಥಾನಗಳು ಖಾಲಿ ಇರುತ್ತವೆ.

ಇ) ೭,೭೯೦